(ಇಂದು ದಿನಾಂಕ 10-10-2019 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು – ವಾದಿ ಪರ ಶ್ರೀ ಪಿ.ಜಿ.ಎಚ್. ವಕೀಲರಿಂದ–**

1. ಪ್ರತಿವಾದಿ ನಂ.1 ಮತ್ತು 2 ನನ್ನ ತಂದೆ ಮತ್ತು ತಾಯಿ ಇರುತ್ತಾರೆ. ಈ ಪ್ರಕರಣದ ವಾದಿ, ಪ್ರತಿವಾದಿ ನಂ. 3 ರಿಂದ 6 ರವರು ನನ್ನ ಸಹೋದರಿಯರು. ಪ್ರತಿವಾದಿ ನಂ.7 ನನ್ನ ಅಕ್ಕ ಮೃತ 5 ನೇ ಪ್ರತಿವಾದಿಯ ಗಂಡನಿರುತ್ತಾನೆ. ದಾವಾ ಆಸ್ತಿಗಳು ನನ್ನ ತಂದೆಯ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ . ದಾವಾ ಆಸ್ತಿಗಳನ್ನು ನನ್ನ ತಂದೆ ಖರೀದಿ ಮಾಡಿದ ಬಗ್ಗೆ ದಾಖಲೆ ಇಲ್ಲ. ದಾವಾ ಆಸ್ತಿಗಳ ಕುರಿತಾಗಿ ನಮ್ಮ ಕುಟುಂಬದಲ್ಲಿ ವಾಂಟಣಿ ಆಗಿಲ್ಲ ಎಂದರೆ ಸಾಕ್ಷಿ ನನ್ನ ತಂದೆ ವಾಂಟಣಿ ದಸ್ತಾವೇಜು ಮಾಡಿರುತ್ತಾನೆ ಎನ್ನುತ್ತಾರೆ. ನನ್ನ ತಂದೆ ಅಂದಾಜು 5 ವರ್ಷಗಳ ಹಿಂದೆ ಅಂದರೆ 5 ನೇ ಪ್ರತಿವಾದಿ ಮರಣ ಹೊಂದುವ ಮೊದಲೇ ಷದ್ರಿ ದಸ್ತಾವೇಜು ತಯಾರಿಸಿರುತ್ತಾರೆ . ಷದ್ರಿ ದಸ್ತಾವೇಜಿನಲ್ಲಿ ವಾದಿ ಸಹಿ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಕಾನೂನು ಪ್ರಕಾರ ವಾದಿಗೆ ಸಲ್ಲತಕ್ಕ ಆಸ್ತಿಗಳಲ್ಲಿ ಪಾಲನ್ನು ನೀಡಲು ನಮ್ಮ ಕಬೂಲಿ ಇದೆ . ನನ್ನ ತಂದೆಗೆ ಗಂಡು ಸಂತತಿ ಇರುವುದಿಲ್ಲ.

2. ವಾದಿ, ಪ್ರತಿವಾದಿ ನಂ. 3 ಮತ್ತು ನಾನು ಹಳಕಾರ ಗ್ರಾಮದಲ್ಲಿ ವಾಸ ಮಾಡಿಕೊಂಡು ಬಂದಿರುತ್ತೇವೆ. ಪ್ರತಿವಾದಿ ನಂ. 4 ಯಲ್ಲಾಪುರದಲ್ಲಿ ವಾಸವಿದ್ದಾರೆ. ಮೃತ ಪ್ರತಿವಾದಿ ನಂ. 5

ವಾಲಗಳ್ಳಿಗೆ ವಿವಾಹವಾದ ನಂತರ ಅಲ್ಲಿಯೇ ವಾಸವಿದ್ದಳು. ನನ್ನ ತಂದೆ ಪ್ರತಿವಾದಿ ನಂ.1 ತನ್ನ ಎಲ್ಲಾ ಹೆಣ್ಣು ಮಕ್ಕಳ ವಿವಾಹವನ್ನು ತಾನೇ ಮುಂದಾಗಿ ನಡೆಸಿರುತ್ತಾನೆ . ದಾವಾ ಆಸ್ತಿಗಳಿಂದ ಸಾಕಷ್ಟು ಆದಾಯ ಬರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಹೊರತುಪಡಿಸಿ ಉಳಿದ ಕುಟುಂಬದ ಆಸ್ತಿಗಳನ್ನು ನನ್ನ ತಂದೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿ. ಸದ್ರಿ ಮಾರಾಟ ಮಾಡಿದ ಆಸ್ತಿಗಳ ಖರೀದಿ ಮೊತ್ತ ನನಗೆ ಗೊತ್ತಿಲ್ಲ.

**3.** ದಾವಾ 'ಬ' ಮನೆಯನ್ನು ನನ್ನ ಅಜ್ಜ ಕಟ್ಟಿಸಿರುತ್ತಾನೆ ಎಂದರೆ ಸರಿಯಲ್ಲ . ನನ್ನ ತಂದೆ ಕಟ್ಟಿಸಿರುತ್ತಾನೆ. ವಾದಿಯ ಮನೆ ಸದ್ರಿ ದಾವಾ ಆಸ್ತಿಯಿಂದ 3 - 4 ಮಾರು ದೂರದಲ್ಲಿದೆ ಎಂದರೆ ಸರಿ. ವಾದಿ ದಿನಂಪ್ರತಿ ದಾವಾ ಆಸ್ತಿಗಳ ಬಳಿ ಬಂದು ವಹಿವಾಟು ಮಾಡುತ್ತಾಳೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 15 ವರ್ಷಗಳಿಂದ ಆಕೆ ತನ್ನ ತಂದೆ ಮನೆಗೆ ಬಂದಿಲ್ಲ ಎನ್ನುತ್ತಾರೆ.

**4.** ದಾವಾ ಅ-3 ಆಸ್ತಿಯನ್ನು ನನ್ನ ತಂದೆ 7 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿ. ಸದ್ರಿ ಆಸ್ತಿಯನ್ನು ಸುಮಾರು ರೂ . 2,50,000-00 ಗಳಿಗೆ ಮಾರಾಟ ಮಾಡಿರುತ್ತಾನೆ. ಸದ್ರಿ ಕ್ರಯದಸ್ತಾವೇಜಿಗೆ ವಾದಿ ಸಹಿ ಮಾಡಿಲ್ಲ . ಆದರೆ ಆಕೆ ಬಾಯಿ ಮಾತಿನಲ್ಲಿ ಅಡ್ಡಿ ಇಲ್ಲ ಎಂದು ಹೇಳಿರುತ್ತಾಳೆ. ನನ್ನ ತಂದೆ ದಾವಾ ಅ-2 ಆಸ್ತಿಯಲ್ಲಿ ಕ್ಷೇತ್ರ 0-3-0 ವನ್ನು 8 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿ . ಸದ್ರಿ ಕ್ರಯದಸ್ತವೇಜಿಗೆ ವಾದಿ ಸಹಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ . 7 ನೇ ಪ್ರತಿವಾದಿ ಖರೀದಿ ನಂತರ ದಾವಾ 'ಬ' ಮನೆ ಆಸ್ತಿಯ ಆಕರಣೆಯಲ್ಲಿ ತನ್ನ ಹೆಸರನ್ನು ನಮೂದು ಮಾಡಿಸಿರುತ್ತಾನೆ. ವಾದಿ ಯಾವತ್ತೂ ತನಗೆ ದಾವಾ ಆಸ್ತಿಯಲ್ಲಿ ಹಕ್ಕು ಬೇಡ ಎಂದು ದಾಖಲೆ ಬರೆದುಕೊಟ್ಟಿಲ್ಲ. ದಾವಾ ಆಸ್ತಿಯನ್ನು ವಾದಿಯ ಹಕ್ಕನ್ನು ವಿಂಗಡಿಸಲು ತಕರಾರು ಇದೆಯೇ

ಎಂದರೆ ಸಾಕ್ಷಿ ಜಮೀನು ಆಸ್ತಿಯಲ್ಲಿ ಹಕ್ಕು ನೀಡಬಹುದು , ಆದರೆ ಮನೆ ಆಸ್ತಿಯಲ್ಲಿ ಹಕ್ಕು ವಿಂಗಡಿಸಲು ಸಾಧ್ಯವಿಲ್ಲ ಎನ್ನುತ್ತಾರೆ .ಪ್ರತಿವಾದಿ ನಂ. 7 ಮತ್ತು 8 ರವರ ಪರವಾಗಿ ಬರೆದುಕೊಟ್ಟ ಕ್ರಯದಸ್ತವೇಜುಗಳು ವಾದಿಗೆ ಬಂಧನಕಾರಕವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಇತರ ಸಹೋದರಿಯರು ನನ್ನ ತಂದೆಯ ಮೇಲೆ ಒತ್ತಡ ಹೇರಿ ಪ್ರತಿವಾದಿ ನಂ.7 ಮತ್ತು 8 ರವರಿಗೆ ಕ್ರಯದಸ್ತವೇಜು ಬರೆಸಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ದಾವೆಯಲ್ಲಿ ಕೋರಿದಂತೆ ಡಿಕ್ರಿ ಮಾಡಲು ನನ್ನ ತಕರಾರು ಇರುವುದಿಲ್ಲ.

**ಮರು ವಿಚಾರಣೆ – ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ